ಮೇಲೂ ದಾಳಿ ನಡೆಯಿತೆಂದು ಹಾರ್ನಳ್ಳಿ ರಾಮಸ್ವಾಮಿಯವರು ಹೇಳಿದರು. ನಿಮಗೆ ಭದ್ರತೆ ಅಗೌರವ ತೋರಿಸಿದಂತಾಗುತ್ತದೆ.

ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ

ಭೀಕರ ಬರಗಾಲದಿಂದಾಗಿ ರೈತರಿಗೆ ತೊಂದರೆ.

* ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಎಸ್.ಜೆ.ಪಿ. , ಬಿ.ಜೆ.ಪಿ. ಹಾಗೂ ವಾಟಾಳ್ ನಾಗರಾಜ್‌ರವರು ಸೇರಿ ರೈತರ ವಿಚಾರವಾಗಿ ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿದ್ದೆವು. ರಾಜ್ಯದಲ್ಲಿ ರೈತರು ಬಹಳ ಕಷ್ಟದಲ್ಲಿದ್ದಾರೆ. ಭೀಕರ ಬರಗಾಲ ಬಂದಿರುವುದಲ್ಲದೆ ಇತ್ತೀಚೆಗುಂಟಾದ ನೆರೆ ಹಾವಳಿಯಿಂದ ವಿದ್ಯುಚ್ಛಕ್ತಿ ಸರಬರಾಜು ಸರಿಯಿಲ್ಲ.

12.20 ಪಿ.ಎಂ.

ಇವತ್ತು ಏನು ಬೆಳೆ ರೈತರ ಕೈಗೆ ಬಂದಿದೆ ಅದಕ್ಕೆ ಸಹ ಸರಿಯಾದ ಬೆಲೆ ಇಲ್ಲ, ಬೆಲೆಗಳೆಲ್ಲಾ ಕುಸಿದು ಬಿದ್ದಿದೆ. ಸರ್ಕಾರ ಇವತ್ತು ಮುಂಗಡ ಪತ್ರದಲ್ಲಿ ರೈತರಿಗೆ ಏನೇನೂ ಕೊಟ್ಟಿಲ್ಲ. ಆದುದರಿಂದ ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದೇನೆ, ಕಡೆಯ ಪಕ್ಷ ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಾಗ, ಜನಪರ ಸರ್ಕಾರವಿದ್ದಾಗ one time operation 6-8 ಸಲ ಸಮಯ ಕೊಟ್ಟು ಬಡ್ಡಿ ರಿಯಾಯಿತಿ, ದಂಡದ ಬಡ್ಡಿ ರಿಯಾಯಿತಿಯನ್ನು ಕೊಟ್ಟರೋ ಅದರ ಪ್ರಕಾರ ಒಂದು ರಿಯಾಯಿತಿಯನ್ನು ಸರ್ಕಾರದವರು ಕೊಡಬೇಕೆಂದು ನಾನು ನಿಲುವಳಿ ಸೂಚನೆಯನ್ನು ಮೂವ್ ಮಾಡಿದ್ದೇನೆ. ಅದರ ಬಗ್ಗೆ ತಮ್ಮ ಕಛೇರಿಯಿಂದ ಒಂದು ಪತ್ರ ಬಂದಿದೆ, ಅದರಲ್ಲಿ ಇದರ ಬಗ್ಗೆ ಬಜೆಟ್‌ನಲ್ಲಿ ಮಾತನಾಡಿ ಎಂದು ಹೇಳಿದೆ. ತಮ್ಮ ಗಮನಕ್ಕೆ ತರುವುದೇನೆಂದರೆ ನಮಗೆ ಸದನದ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆ ಇಲ್ಲ. ಆದರೆ, ಈ ವಿಷಯ ಬಹಳ ಗಂಭೀರವಾದುದು, ರಾಜ್ಯದ ರೈತರು ರಾಜ್ಯದ ಇತಿಹಾಸದಲ್ಲಿ ಎಂದೆಂದೂ ಇರದಂಥ ಕಷ್ಟದಲ್ಲಿ ಇಂದು ಇದ್ದಾರೆ. ನೆರೆಹಾವಳಿ ಒಂದು ಕಡೆಯಾದರೆ ಬರಗಾಲ ಮತ್ತೊಂದು ಕಡೆ. ಜೋಳ, ಗೋಧಿ, ಭತ್ತ, ಹತ್ತಿ ಎಲ್ಲವುಗಳೂ ಸಹ ಕೊಲ್ಯಾಪ್ಸ್ ಆಗಿದೆ. ತಾವು ರೈತರ ಕುಟುಂಬದಿಂದ ಬಂದಿದ್ದೀರಿ, ತಮಗೂ ಸಹ ಅದು ಗೊತ್ತು. ಇಂಥ ಪರಿಸ್ಥಿತಿಯಲ್ಲಿ ಇದನ್ನು ಬಜೆಟ್‌ನಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ, ಇದು ಒಂದು ಸ್ಪೆಸಿಫಿಕ್ ಇಷ್ಯೂ ಬಗ್ಗೆ ಬಜೆಟ್‌ನಲ್ಲಿ ಮಾತನಾಡುವುದರಿಂದ ನಮಗೇನೂ ಲಾಭವಾಗುವುದಿಲ್ಲ. ನಾವು ಕೆಲವು ವಿಚಾರಗಳನ್ನು ಹೇಳಬೇಕು. ಅದನ್ನು ಹೇಳಿದ್ದೇವೆ, ಸರ್ಕಾರ ಕೂಡ ಇದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು, ನಾವು ವಿವರಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವು ಏನು ನಿಲುವಳಿ ಸೂಚನೆಯನ್ನು ತಂದಿದ್ದೇವೆ ಅದನ್ನೂ ಕೂಡ ಸ್ವಲ್ಪ ನೋಡಬೇಕಾಗುತ್ತದೆ.

ಅಧ್ಯಕ್ಷರು : ತಮ್ಮ ನಿಲುವಳಿ ಸೂಚನೆಗೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇವೆ.

(ಗೊಂದಲ)

ಅಧ್ಯಕ್ಷರು : ತಾವು ನಿಲುವಳಿ ಸೂಚನೆಯನ್ನು ಕೊಟ್ಟಿರತಕ್ಕದ್ದನ್ನು ಮತ್ತು ಆ ವಿಷಯವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಆ ಪ್ರಕಾರವಾಗಿ ತಮಗೆ ಬಜೆಟಿನ ಮೇಲೆ ಮಾತನಾಡುವಾಗ ಇದರ ಬಗ್ಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೇನೆ. ಒಂದು ವೇಳೆ ಚರ್ಚೆ ಮಾಡಬೇಕೆಂದು ಇದ್ದರೆ ನನ್ನ ಕೊಠಡಿಗೆ ಬಂದು ಕನ್‌ವಿನ್ಸ್ ಮಾಡಿ, ಮುಂದೆ ಇದರ ಬಗ್ಗೆಹೇಳುವೆ.

(ಗೊಂದಲ)

ಅಧ್ಯಕ್ಷರು : ನನ್ನ ಕೊಠಡಿಗೆ ಬನ್ನಿ ನಂತರ ಇದರ ಬಗ್ಗೆ ಚರ್ಚೆ ಮಾಡೋಣ. ಈಗ ಗಮನ ಸೆಳೆಯುವ ಸೂಚನೆಗಳು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ನಿಯಮದ ಪ್ರಕಾರ ನಿಲುವಳಿ ಸೂಚನೆಯನ್ನು ತರಲು ನೀಡಲಾದ ಅನುಮತಿಗೆ ಆಕ್ಷೇಪ ಬಂದಲ್ಲಿ ಅಧ್ಯಕ್ಷರು ನಿಲುವಳಿ ಸೂಚನೆಯನ್ನು ತರಬೇಕೆಂದು ಬಯಸುವಂಥ ಸದಸ್ಯರುಗಳು ತಮ್ಮ ಸ್ಥಾನಗಳಲ್ಲಿ ಎದ್ದು ನಿಲ್ಲಬೇಕೆಂದು ವಿನಂತಿ ಮಾಡಿಕೊಳ್ಳಬೇಕು. ಅನಂತರ 23 ಸದಸ್ಯರಿಗಿಂತ ಕಡಿಮೆ ಇಲ್ಲದೆ ಸದಸ್ಯರುಗಳು ಎದ್ದು ನಿಂತರೆ ನಿಲುವಳಿ ಸೂಚನೆಗೆ ಅನುಮತಿ ಸಿಕ್ಕಿದೆ ಎಂದು ಸದನಕ್ಕೆ ತಿಳಿಸಿರಬೇಕು. 23 ಸದಸ್ಯರುಗಳಿಗಿಂತ ಕಡಿಮೆ ಸದಸ್ಯರು ಎದ್ದು ನಿಂತರೆ ನಿಲುವಳಿ ಸೂಚನೆಗೆ ಅವಕಾಶವಿಲ್ಲವೆಂದು ತಿಳಿದುಕೊಳ್ಳಬೇಕು. ಎರಡನೆಯದಾಗಿ ಇದರ ಬಗ್ಗೆ ನಿಲುವಳಿ ಸೂಚನೆ ಬೇಡ, ಬೇರೆ ಯಾವುದಾದರೊಂದು ರೂಪದಲ್ಲಿ ಅವಕಾಶ ಮಾಡಿಕೊಡಬೇಕು. ನಾನು ವಿವರಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ನನ್ನ ಕೊಠಡಿಗೆ ಸಂಜೆ ಬನ್ನಿ, ವಿವರವಾಗಿ ಮಾತನಾಡೋಣ.

ಶ್ರೀ ಸಿ. ಬೈರೇಗೌಡ : ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಕೊಠಡಿಗೆ ಬರುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಆದರೆ ತಾವು ನಮಗೆ ಕಳಿಸಿರುವ ಪತ್ರದಲ್ಲಿ ಬಜೆಟಿನ ಮೇಲೆ ಮಾತನಾಡುವ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಮಾತನಾಡಿ ಎಂದು ಹೇಳಿದ್ದೀರಿ, ಆದರೆ ಬಜೆಟ್‌ನಲ್ಲಿ ಇದರ ಬಗ್ಗೆ ಪ್ರಸ್ತಾಪವೇ ಇಲ್ಲ. ಆದ್ದರಿಂದ ಪ್ರಸ್ತಾಪವಿಲ್ಲದೇ ಇರತಕ್ಕ ವಿಷಯದ ಬಗ್ಗೆ ನಾವು ಮಾತನಾಡಿದರೆ ಅದು ಎಷ್ಟರಮಟ್ಟಿಗೆ ಸಮಂಜಸವಾಗುತ್ತದೆ? ಅದು ಎಷ್ಟರಮಟ್ಟಿಗೆ ರೀಸನಬಲ್ ಆಗುತ್ತದೆ ಹೇಳಿ. ಈ ವಿಷಯವನ್ನು ಈ ಅಧಿವೇಶನವು ಪ್ರಾರಂಭವಾಗುವುದಕ್ಕೆ ಮೊದಲೇ ಪ್ರಸ್ತಾಪ ಮಾಡಬೇಕೆಂದಿದ್ದೆವು, ಆದರೆ ಬಜೆಟಿನಲ್ಲಿ ಏನು ಮಾಡುತ್ತಾರೆ ಕಾದು ನೋಡೋಣ, ನಂತರ ಬಜೆಟಿನಲ್ಲಿ ಸರ್ಕಾರ ಏನೂ ಇದರ ಬಗ್ಗೆ ಮಾಡದಿದ್ದರೆ ಆಮೇಲೆ ಪ್ರಸ್ತಾಪ ಮಾಡೋಣವೆಂದು ಇವತ್ತು ತಂದಿದ್ದೇವೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಆಯವ್ಯಯದಲ್ಲಿ ರೈತರ ಬಗ್ಗೆ

ಒಂದು ಪದವೂ ಇಲ್ಲ. ರೈತರ ಸಾಲದ ಬಗ್ಗೆ ಏನೂ ಹೇಳಿಲ್ಲ. ಬನ್ನಿ ಈಗಲೇ ನಿಮ್ಮ ಕೊಠಡಿಗೆ ಹೋಗೋಣ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ತಮ್ಮ ಸಲಹೆಯನ್ನು ನಾವು ಒಪ್ಪುವುದಕ್ಕೆ ತಯಾರಿದ್ದೇವೆ. ನಾವು ನಿಮ್ಮ ಕೊಠಡಿಗೆ ಬರುವುದಕ್ಕೆ ತಯಾರಿದ್ದೇವೆ. ನಿಮ್ಮ ತೀರ್ಮಾನವನ್ನು ಒಪ್ಪಿಕೊಳ್ಳುತ್ತೇವೆ. ಇದು ಬಹಳ ಗಂಭೀರವಾದ ಸಮಸ್ಯೆ ಹಾಗಾಗಿ ನಾವು ಇದನ್ನು ಪ್ರಸ್ತಾಪ ಮಾಡಿದ್ದೇವೆ. ನಾವು ಸದನದ ಸಮಯವನ್ನು ಹಾಳು ಮಾಡಬೇಕೆಂದಿಲ್ಲ. ಬಡ್ಜೆಟ್ ಬಗ್ಗೆ ಚರ್ಚೆಯಾಗಬೇಕಾಗಿದೆ. ಅದಕ್ಕೆ ನಾವು ತೊಂದರೆ ಮಾಡುವುದಿಲ್ಲ. ರೈತರ ಬಗ್ಗೆ ಮುಂಗಡ ಪತ್ರದಲ್ಲಿ ನಾನು ನಿನ್ನೆ ಹೇಳಿದಂತೆ ಏನೇನೂ ಇಲ್ಲ. ಇಂಟೆರೆಸ್ಟ್ ಸಬ್ಸಿಡಿ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು ಸ್ಮಾಲ್ ಅಂಡ್ ಮೇಜರ್ ಫಾರ್‌ಮರ್‌ಗೆ, 35 ಕೋಟಿ ರೂಪಾಯಿಗಳು ಲಿಯಾಬಿಲಿಟೀಸ್ ಬರುತ್ತದೆ. ಆದ್ದರಿಂದ ತಾವು ಈಗ ಹೌಸ್ ಅಡ್ಜರ್ನ್ ಮಾಡಿ ನಿಮ್ಮ ಕೊಠಡಿಗೆ ಬರುತ್ತೇವೆ. ಅವರನ್ನು ಕರೆಯಿಸಿ ಡಿಸ್‌ಕಷನ್ ಮಾಡಿ ಫೈನಲ್ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾತನಾಡುವುದಕ್ಕೆ ಅವಕಾಶ ಕೊಡಿ. ನಿಮ್ಮ ತೀರ್ಮಾನಕ್ಕೆ ನಾವು ತಲೆ ಬಾಗುತ್ತೇವೆ. ನಿಮ್ಮ ರೂಲ್ಸ್ ರೆಗ್ಯೂಲೇಷನ್ ನಾವು ಫಾಲೋ ಮಾಡಬೇಕಾಗಿದೆ.

ಅಧ್ಯಕ್ಷರು : ಎರಡು ಗಂಟೆಗಳು ಬಿಟ್ಟು ಮಾತನಾಡೋಣ ಎಂದು ಹೇಳಿದರೂ ಏಕೆ ಹೀಗೆ ಗಲಾಟೆ ಮಾಡುತ್ತೀರಿ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಶ್ರೀ ಗುರುಪಾದಪ್ಪನವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ಕೋ-ಆಪರೇಟಿವ್ ಸಾಲದ ಬಗ್ಗೆ ಪ್ರಸ್ತಾಪ ಮಾಡಿದರು. ಅವರು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರೂ ಆಗಿದ್ದಾರೆ. ಮಾರ್ಕೆಟಿಂಗ್ ಫೆಡರೇಷನ್ ಅಧ್ಯಕ್ಷರೂ ಆಗಿದ್ದಾರೆ. ಅವರು ಹೆಚ್ಚು ಸಮಯ ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಅವರು ಒಂದು ಮಾತನ್ನು ಪ್ರಸ್ತಾಪ ಮಾಡಿದರು. ಸಹಕಾರ ಸಂಸ್ಥೆಗಳು ಕೆಲಸ ಮಾಡುವಂತಹ ಪರಿಸ್ಥಿತಿಗೆ ಬಂದಿದೆ, ಇದಕ್ಕೆ ನಾನು ವಿರೋಧ ಎನ್ನುವ ಮಾತನ್ನು ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರೆಲ್ಲರೂ ಈಗ ಒಂದೇ ಪಕ್ಷದವರು ಇದ್ದಾರೆ. ಅವರು ಈ ಮನೆಯ ಸದಸ್ಯರು ಅಷ್ಟೇ ಅಲ್ಲ, ಅಪೆಕ್ಸ್ ಬ್ಯಾಂಕ್ ಬಹಳ ಪ್ರಮುಖವಾದಂತಹ ಸಂಸ್ಥೆ, ಸಹಕಾರ ಕ್ಷೇತ್ರದಲ್ಲಿ ಜಿಲ್ಲಾ ಬ್ಯಾಂಕಿಗೆ ಗ್ರಾಮೀಣ ಮಟ್ಟದಲ್ಲಿ ಸಹಕಾರಿ ಸಂಸ್ಥೆಗಳಿಗೆ ಹಣವನ್ನು ಕೊಡುತ್ತದೆ. ಹೋದ ವರ್ಷ ಜೂನ್ ತಿಂಗಳು ಬರುತ್ತಿದ್ದ ಹಾಗೆ ಸಾಲಕ್ಕೆ ಏನೂ ಇಲ್ಲದಂತಾಯಿತು. ಈ ವರ್ಷ ಕೂಡ ರಬಿ ಕ್ರಾಪ್ ಬೆಳೆಗೆ ಸಾಲ ಇಲ್ಲದೇ ಇರತಕ್ಕ ಪರಿಸ್ಥಿತಿ ಇದೆ. ಹೀಗಿರುವಾಗ ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಒತ್ತಾಯ ಮಾಡುತ್ತಿದ್ದಾರೆ. ಪಕ್ಷದ ನಿಲುವು ಏನು ಎಂದು ಕೇಳಿದ್ದಾರೆ. ಇದು ಸಣ್ಣ ವಿಚಾರ ಅಲ್ಲ. ತತ್‌ಕ್ಷಣವೇ ಈ ಸಭೆಯಲ್ಲಿ ಕೊಡುತ್ತೇವೆ ಎನ್ನತಕ್ಕ ವಿಚಾರವಲ್ಲ. ಇದು ಒಂದು ನೀತಿಯ ಪ್ರಶ್ನೆಯೂ ಆಗಿದೆ. ಇಂದು ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡದೆ ಇರುವಂತಹ ಪರಿಸ್ಥಿತಿ ಒದಗಿದೆ. ಇಡೀ ರಾಜ್ಯದ ರೈತರನ್ನು ಟ್ರೆಡಿಷನಲ್ ಮನಿ ಲೆಂಡರ್ಸ್ ಏನು ಇದ್ದಾರೆ, ಅವರ ವಶಕ್ಕೆ ಕೊಡುವಂತಹ ಪರಿಸ್ಥಿತಿ ಇದೆ.

ಇದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ವಿಚಾರ ಮಾಡಿ ಹೇಳಿದರೆ ಬಹಳ ಒಳ್ಳೆಯದು.
(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಶ್ರೀ ರಂಗನಾಥ್‌ರವರಿಗೆ ತಪ್ಪು ಕಲ್ಪನೆಯಾಗಿದೆ. ಶ್ರೀ ಗುರುಪಾದಪ್ಪನವರು ಹೇಳಿದ್ದುದು ಬಡ್ಡಿ ಮತ್ತು ಸುಸ್ತಿ ಬಡ್ಡಿ ರಿಯಾಯಿತಿ ಬಹಳ ಇದೆ ಎಂದು ಹೇಳಿದ್ದೇವೆ. ನಾವು ಸಾಲದ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಎರಡನೆಯದು ನಾನೂ ಸಹ ಕೋ-ಆಪರೇಟಿವ್ ಫೀಲ್ಡ್‌ನಿಂದಲೇ ಬಂದಿದ್ದೇನೆ. ಲ್ಯಾಂಪ್ ಬ್ಯಾಂಕ್‌ನಲ್ಲೂ ಭೇರಮನ್ ಆಗಿದ್ದೆ. ಕೋ-ಆಪರೇಟಿವ್ ಇನ್ಸ್‌ಟಿಟ್ಯೂಷನ್ ವೀಕ್ ಆಗುವುದಕ್ಕೆ ಮುಖ್ಯ ಕಾರಣ ಸರ್ಕಾರದ ನೀತಿ ಸರಿಯಾಗಿಲ್ಲ. ಸರ್ಕಾರದಿಂದ ಕೊಡಬೇಕಾದ ಹಣ ಕೊಟ್ಟಿಲ್ಲ. 25 ಕೋಟಿ ರೂಪಾಯಿಗಳು ಡ್ಯೂ ಇದೆ.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದ ನೀತಿ 1983 ರವರೆಗೆ ಅವರ ಸರ್ಕಾರದ ನೀತಿ 1983 ರಿಂದ 1989ರವರೆಗೆ.
(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಮೊದಲು ಈ ಕಡೆ ಕುಳಿತಿರತಕ್ಕ ಪಕ್ಷದಲ್ಲಿ ಒಬ್ಬೊಬ್ಬರು ಒಂದೊಂದು ಹೇಳುತ್ತಾ ಇದ್ದುದು ನಿಜ. ಬಿ.ಜೆ.ಪಿ.ಯವರು ಸಾಲ ವಜಾ ಮಾಡಲೇಬೇಕು ಎನ್ನತಕ್ಕ ಮಾತು ಹೇಳುತ್ತಿದ್ದರು. ಆದರೆ ಇವತ್ತು ಸಾಲ ವಜಾ ಮಾಡಿ ಎಂದು ಬಿ.ಜೆ.ಪಿ. ಸ್ನೇಹಿತರೂ ಕೇಳುತ್ತಿಲ್ಲ. ನಾವೂ ಕೂಡ ಕೇಳುತ್ತಿಲ್ಲ. ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತಿರುವುದು ಒಂದು ಟೈಮ್ ಅಪರೇಷನ್ ಆಗಿ ಬಡ್ಡಿ ಮತ್ತು ಸುಸ್ತಿ ಭಡ್ಡಿಯನ್ನು ಮಾತ್ರ ವಜಾ ಮಾಡಿ ಮತ್ತು ಯಾರು ಅವಧಿಯೊಳಗೆ ಸಾಲ ಮರು ಪಾವತಿ ಮಾಡುತ್ತಾರೋ ಅವರಿಗೆ ಹಿಂದೆ ಇದ್ದಂತೆ ಇನ್‌ಸೆಂಟೀವ್ ಕೊಡತಕ್ಕದ್ದು. ಇಷ್ಟೇ ಸಿಂಪಲ್ ಆಗಿರತಕ್ಕಂತದ್ದು. ಮಾನ್ಯ ರಂಗನಾಥ್‌ರವರು ಪ್ರೈವೇಟ್ ಮನಿಲೆಂಡರ್ಸ್ ಹತ್ತಿರ ರೈತ ಹೋಗಿ ಕುತ್ತಿಗೆಗೆ ಉರುಳು ಹಾಕಿಕೊಳ್ಳತಕ್ಕ ಮಾತನ್ನು ಹೇಳಿದ್ದಾರೆ. ತಾವು ಅದರ ಪ್ರಾಮುಖ್ಯತೆಯನ್ನು ಅರಿತು ಈಗಲೇ ತಾವು ಸ್ಪಷ್ಟವಾಗಿ ಚರ್ಚೆಗೆ ಕರೆದರೆ ನಾವು ಬರುವುದಕ್ಕೆ ತಯಾರಿದ್ದೇವೆ.

Sri. Y. K. Ramaiah : I have a point of order ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ತಮ್ಮ ಕಛೇರಿಯಿಂದ ನನಗೆ ಒಂದು ಪತ್ರ ಬಂದಿದೆ. ಏನೆಂದರೆ, ಕಾವೇರಿ ಮತ್ತು ಕೃಷ್ಣ ನದಿಗಳ ನೀರು ಹಂಚಿಕೆಯಿಂದ ಕರ್ನಾಟಕ ರಾಜ್ಯಕ್ಕೆ ಆಗಿರುವ ತೊಂದರೆ ತಾವು ಬಗ್ಗೆ ನಿಯಮ 58ರ ಮೇರೆಗೆ ಪ್ರಸ್ತಾಪ ಮಾಡಲು ಕಳುಹಿಸಿರುವ ಸೂಚನೆಯನ್ನು ಆಯವ್ಯಯ ಮಂಡನೆ ಮೇಲೆ ನಡೆಸುವ ಸಾಮಾನ್ಯ ಚರ್ಚೆ ಸಮಯದಲ್ಲಿ ಪ್ರಸ್ತಾಪ ಮಾಡಬಹುದೆಂದು ಅಧ್ಯಕ್ಷರು ತೀರ್ಮಾನ ಮಾಡಬೇಕು. ಸನ್ಮಾನ್ಯ ಅಧ್ಯಕ್ಷರೇ, ತಾವು ಕುಳಿತಿರುವ ಸ್ಥಾನಕ್ಕೆ ಯಾರೇ ಕುಳಿತುಕೊಂಡರೂ ಅತ್ಯಂತ ಹೆಚ್ಚಿನ ಗೌರವವನ್ನು ಕೊಡಬೇಕಾದುದು ನಮ್ಮ ಆದ್ಯ ಕರ್ತವ್ಯ. ಆದರೆ ಇಂತಹ ಸಮಯದಲ್ಲಿ ನಾವು ಏನು ಮಾಡಬೇಕೆಂದು ಅರ್ಥವಾಗುವುದಿಲ್ಲ. ಒಂದು ಕಡೆ ಸಂಕಟ ನಮಗೆ. ಆ ಸ್ಥಾನಕ್ಕೆ ಗೌರವವನ್ನು ಕೊಡದಿರುವ ರೀತಿಯಲ್ಲಿ ನಡೆದುಕೊಳ್ಳಬಾರದು. ಗೌರವ ಕೊಡಬೇಕು. ಆದರೆ, ಇಂತಹ ಒಂದು ತೀರ್ಮಾನಗಳನ್ನು ನೀವು ತೆಗೆದುಕೊಂಡಾಗ ನಾವು ಏನು ಮಾಡಬೇಕು ಎನ್ನುವುದರ ಬಗ್ಗೆ ಒಂದು ಚರ್ಚೆ 68 ರಲ್ಲಿ ನಾವು ಚರ್ಚೆ ಮಾಡುವುದಕ್ಕೂ ಮಾನ್ಯ ಆಯವ್ಯಯ ಮೇಲೆ ಚರ್ಚೆ ಮಾಡುವುದಕ್ಕೂ ವ್ಯತ್ಯಾಸ ನಿಮಗೆ ತಿಳಿದಿಲ್ಲವೆಂದು ನಾನು

ಭಾವಿಸಿಕೊಳ್ಳುವುದಿಲ್ಲ. ತಮಗೆ ತಿಳಿದಿದೆ 68ರಲ್ಲಿ ಯಾವುದೇ ಒಂದು ವಿಷಯವನ್ನು ಪ್ರಸ್ತಾಪ ಮಾಡಿದಾಗ ಚರ್ಚೆ ಮಾಡಿ ಸರ್ಕಾರದ ಗಮನಕ್ಕೆ ತಂದಾಗ ಸಂಬಂಧಪಟ್ಟ ಮಂತ್ರಿಗಳು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಆದರೆ ಇವತ್ತು ಆಯವ್ಯಯದ ಮೇಲೆ ಚರ್ಚೆ ಮಾಡುವಾಗ ಮುಖ್ಯ ಮಂತ್ರಿಗಳು ಉತ್ತರ ಮಾಡಬೇಕಾಗುತ್ತದೆ. ಅವರು ನಮ್ಮ ಪ್ರಶ್ನೆಗೆ ಉತ್ತರ ಕೊಡಬಹುದು, ಬಿಡಬಹುದು. ಇದು ಒಂದು. ಇಂತಹ ಒಂದು ಗಂಭೀರವಾದಂಥ ವಿಷಯದಲ್ಲಿ ಮೊನ್ನೆ ಮುಖ್ಯ ಮಂತ್ರಿಗಳು ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಟ್ಟಿದ್ದನ್ನು ನೋಡಿದರೆ ನಾವು ಏನೋ ಕಂಠ ಶೋಷಣೆ ಮಾಡಿಕೊಳ್ಳುತ್ತೇವೆ, ಅವರು ಏನೋ ಒಂದು ಹೇಳುತ್ತಾರೆ ಎನ್ನುವ ಅಭಿಪ್ರಾಯವನ್ನು ತಾವು ಇಟ್ಟುಕೊಂಡಿದ್ದೀರೋ ಏನೋ ಎಂದು ನಾವು ಭಾವಿಸಬೇಕಾಗುತ್ತದೆ.

ಅಧ್ಯಕ್ಷರು : ತಾವು ತಮ್ಮ ಪಾಯಿಂಟ್ ಆಫ್ ರೂಲ್ ಹೇಳಿ.

Sri . Haranahalli Ramaswamy : The point of order should be precise and concise..

ಶ್ರೀ ವೈ. ಕೆ. ರಾಮಯ್ಯ : ಅಲ್ಲಿಗೆ ಬರುತ್ತೇನೆ ಸ್ವಾಮಿ, ಪಾಯಿಂಟ್ ಆಫ್ ಆರ್ಡರ್. ನಾನು ನಿಮಗೆ ಕನ್‌ವಿನ್ಸ್ ಮಾಡುತ್ತಿದ್ದೇನೆ. ದಯವಿಟ್ಟು ಒಂದು ನಿಮಿಷ ಅವಕಾಶ ಕೊಡಿ. ದೇಶ ಏನೂ ಮುಳುಗುವುದಿಲ್ಲ. ನಿಯಮ 68ರಲ್ಲಿ,72ರಲ್ಲಿ,78ರಲ್ಲಿ ಚರ್ಚೆ ಮಾಡುವ ಎಲ್ಲಾ ವಿಷಯಗಳನ್ನು ಸಾಮಾನ್ಯ ಆಯವ್ಯಯದಲ್ಲಿ ಚರ್ಚೆ ಮಾಡುವ ಪ್ರಮೇಯ ಇದ್ದರೆ, ಇದರಲ್ಲಿರತಕ್ಕ ಎಲ್ಲಾ ನಿಯಮಗಳನ್ನು ಬೆಂಕಿಯಲ್ಲಿ ಹಾಕಬೇಕು. Can we discuss all the matters only in a budget? ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ ಶ್ರೀ ಹನುಮೇಗೌಡರು ತಂದಿರತಕ್ಕಂತಹ ವಿಷಯಗಳನ್ನು ಈ ಚರ್ಚೆಯಲ್ಲಿ ಚರ್ಚಿಸಬಹುದು. ದಯಮಾಡಿ, ತಾವು ಡಿಸ್‌ಅಲೋ ಮಾಡಬೇಕು. That is my point of order. ಈ ಬಗ್ಗೆ ತಾವು ಆರ್ಡರ್ ಮಾಡಬೇಕು. ಈಗ ಅವರು ಮದ್ಯದ ಅಂಗಡಿಗಳ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಎಕ್ಸೈಸ್ ಬಗ್ಗೆ ವ್ಯಾಪಕವಾದ ಪ್ರಸ್ತಾವನೆ ಆಯವ್ಯಯದಲ್ಲಿ ಇದೆ. ಅದರ ಮೇಲೆ ಚರ್ಚೆ ಮಾಡಬಹುದು. Then why this has been allowed as Call Attention Motion and why the 68 discussion is disallowed ಇದೇ ನನ್ನ ಪಾಯಿಂಟ್ ಆಫ್ ಆರ್ಡರ್. ಎಲ್ಲಾ ವಿಷಯಗಳನ್ನು ಆಯವ್ಯಯದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ ಎನ್ನತಕ್ಕ ತಮ್ಮ ಅಪ್ಪಣೆಗೆ ನಾನು ಗೌರವ ಕೊಟ್ಟು ಪ್ರಾರ್ಥನೆ ಮಾಡುತ್ತೇನೆ. ಶ್ರೀ ಹನುಮೇಗೌಡರಾಗಲೀ ಅಥವಾ ಯಾರೇ ಒಬ್ಬರು ತಂದಿರತಕ್ಕ ಗಮನ ಸೆಳೆಯುವ ಸೂಚನೆಯ ವಿಷಯವನ್ನೂ ಕೂಡ ಆಯವ್ಯಯದಲ್ಲಿ ಚರ್ಚಿಸಲು ಅವಕಾಶ ಇರುವುದರಿಂದ ತಾವು ಇದನ್ನು ಡಿಸ್‌ಅಲೋ ಮಾಡಿ, ಆಯವ್ಯಯದ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಾನು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ : ಇದಕ್ಕೆ ರುಜು ಮಾಡಿದವರಲ್ಲಿ ನಾನೂ ಒಬ್ಬ. ನಾನು ಹಾಗೂ ರಾಮಯ್ಯನವರು ರುಜು ಮಾಡಿದ ನೋಟಿಸ್‌ಗೆ ತಮ್ಮಿಂದ ಪತ್ರ ಬಂದಿದೆ. ಶ್ರೀ ರಾಮಯ್ಯನವರು

ಸೂಕ್ಷ್ಮವಾಗಿ ಹೇಳಿದ್ದಾರೆ. ಕಾವೇರಿ ಮತ್ತು ಕೃಷ್ಣಾ ಬಗ್ಗೆ ಅವರು ಹೇಳಿದ್ದಾರೆ. ತಲೆ ತಲಾಂತರಗಳಿಂದ ಇವು ಶಾಪವಾಗಿ ಪರಿಣಾಮ ಬೀರುತ್ತವೆ. ಎಲ್ಲದಕ್ಕೂ ಆಯವ್ಯಯ ಪತ್ರ ಇದೆ. ಈ ಸದನದಲ್ಲಿ 15-20 ವರ್ಷಗಳಿಂದ ಅನುಭವವನ್ನು ಪಡೆದುಕೊಂಡಿದ್ದೇನೆ. ಇದು ಪ್ರತಿ ವರ್ಷ ಮಾಮೂಲಾಗಿ ಬರುತ್ತಿದೆ, ಮಾಮೂಲಾಗಿ ಹೇಳುತ್ತೇವೆ, ಮಾಮೂಲಾಗಿ ಅವರು ಉತ್ತರ ಕೊಡುತ್ತಾರೆ. ಆದರೆ, ಇದು ಮಾಮೂಲಾದ ವಿಷಯ ಅಲ್ಲ. ನಾವು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆ, ನಾವು ಅನೇಕ ವಿಚಾರಗಳನ್ನು ಬಡ್ಜೆಟ್‌ನಲ್ಲಿ ಮಾತನಾಡಿರುತ್ತೇವೆ. ಎಲ್ಲದಕ್ಕೂ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ನಾನೂ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನಾನೂ ಉತ್ತರ ಕೊಟ್ಟಿದ್ದೇನೆ. ಎಲ್ಲರೂ ಹೇಳತಕ್ಕ ವಿಚಾರಗಳಿಗೆ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಇವೊತ್ತು ವಿಶೇಷವಾಗಿ ಈ ವಿಷಯದಲ್ಲಿ ಚರ್ಚೆಯಾಗಬೇಕಾಗಿದೆ. ಅದಕ್ಕೋಸ್ಕರ ನಾನು ಮತ್ತು ಶ್ರೀ ವೈ. ಕೆ. ರಾಮಯ್ಯನವರು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ತಾವು ದಯಮಾಡಿ ವಿಶೇಷವಾಗಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ನಾನೂ ಇದಕ್ಕೆ ಸಿಗ್ನೆಟರಿ ಆಗಿದ್ದೇನೆ.

ಶ್ರೀ ವೈ. ಕೆ. ರಾಮಯ್ಯ : ಇದಕ್ಕಿಂತ ಪ್ರಾಮುಖ್ಯವಾದ ವಿಷಯ ಇನ್ನು ಯಾವುದು ಇದೆ? ಇದು ಬೇಡ ಅಂದರೆ ಈ ಸದನ ಏಕೆ ಬೇಕು?

ಶ್ರೀ ಬಿ. ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಇವೊತ್ತು ತಾವು ಕೊಟ್ಟಂಥ ನಿರ್ಣಯಕ್ಕೆ ನಾವು ಬದ್ಧರು. ಆ ಸ್ಥಾನಕ್ಕೆ ನಾವು ಗೌರವ ಕೊಡತಕ್ಕದ್ದು ನಮ್ಮ ಆದ್ಯ ಕರ್ತವ್ಯ. ಆದರೆ, ತಾವು ಬಡ್ಜೆಟ್‌ನಲ್ಲಿ ಹೇಳಬಹುದು ಎಂದು ಹೇಳಿದ್ದೀರಿ. ಅದು ಸಾಮಾನ್ಯ ಚರ್ಚೆ. ಕೆಲವೊಂದಕ್ಕೆ ಉತ್ತರ ಕೊಡುತ್ತಾರೆ. ಕೆಲವು ವಿಷಯಗಳಿಗೆ ಉತ್ತರ ಕೊಡುವುದಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಅದನ್ನು ನೋಡಿದ್ದೇನೆ. ಇಲ್ಲಿರತಕ್ಕ ನಿಯಮಗಳ ಪ್ರಕಾರ ವಿಷಯಗಳನ್ನು ಚರ್ಚೆ ಮಾಡಿ ಸರ್ಕಾರದಿಂದ ನಿಖರವಾಗಿ ನಿರ್ದಿಷ್ಟವಾಗಿ ಒಂದು ನಿಗದಿತ ವೇಳೆಯಲ್ಲಿ ಯೋಜನೆಗಳ ಪ್ರಗತಿಯನ್ನು ಸಾಧಿಸಬೇಕೆನ್ನುವ ದೃಷ್ಟಿಯಿಂದ ಈ ಒಂದು ವಿಷಯವನ್ನು ತರಲಾಗಿದೆ. ಕೃಷ್ಣಾ, ಕಾವೇರಿ, ರೈತರ ಸಾಲದ ಮನ್ನಾ ಹಾಗೂ ಇತರ ವಿಷಯಗಳು ಬಹಳ ಮುಖ್ಯವಾಗಿವೆ. ಈ ವಿಷಯಗಳನ್ನು ಈ ಸದನದಲ್ಲಿ ಎತ್ತಿ ಸವಿಸ್ತಾರವಾದ ಚರ್ಚೆ ಮಾಡಬೇಕು. ಸರ್ಕಾರ ನಿರ್ದಿಷ್ಟವಾದ ಉತ್ತರವನ್ನೂ ಕೊಡಬೇಕು. ರಾಜ್ಯದ ರೈತರ ಗ್ರಾಮೀಣ ಅಭಿವೃದ್ಧಿ ಮತ್ತು ನೀರಾವರಿ ಯೋಜನೆಗಳಿಗೆ ಹೆಚ್ಚಿನ ಅನುಕೂಲತೆಗಳನ್ನು ಸರ್ಕಾರ ಒದಗಿಸಬೇಕು. ಈ ಸದಿಚ್ಛೆಯಿಂದ ಇದನ್ನು ತಂದಿದ್ದೇವೆ. ನೀರಾವರಿ ಸಮಸ್ಯೆ ಏನು ಎಂಬುದು ತಮಗೆ ಗೊತ್ತಿದೆ. 2 ಸಾವಿರ ವರ್ಷದ ಒಳಗೆ ಕೃಷ್ಣಾ ನೀರನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಬೇಕು. ಈಗಾಗಲೇ ಕಾವೇರಿ ಕಣ್ಣೀರಿನ ಕಥೆಯು ತಮಗೆಲ್ಲರಿಗೂ ಗೊತ್ತಿದೆ. ಕೃಷ್ಣಾದಲ್ಲಿ ರಾಜ್ಯದ ರೈತರನ್ನು ತೇಲಿ ಬಿಡುವ ಕೆಲಸವನ್ನು ಮಾಡಬಾರದು, ಎನ್ನುವ ಉದ್ದೇಶದಿಂದ ಕೇಳಿದ್ದೇವೆಯೇ ವಿನಹಃ ಬೇರೆ ಅಲ್ಲ. ನಮ್ಮ ರಾಜ್ಯದ ರೈತರ ಗ್ರಾಮೀಣ ಅಭಿವೃದ್ಧಿ ಬಗ್ಗೆ ಯಾರೇ ಸದಸ್ಯರು ಇದ್ದರೂ ನಮ್ಮ ಉತ್ಕಟ ಇಚ್ಛೆ ಇಷ್ಟೇ ಇದೆಯೆಂದು ಭಾವಿಸಿಕೊಳ್ಳಬೇಕು. ಇದನ್ನು ಮತ್ತೊಂದು ರೂಪದಲ್ಲಿ ತರಲು ನಮಗೆ ಅವಕಾಶವನ್ನು

ಮಾಡಿಕೊಡಬೇಕು. ತಾವು ತಮ್ಮ ತೀರ್ಪನ್ನು ಪುನರ್ ಪರಿಶೀಲನೆ ಮಾಡಿ ಈ ವಿಷಯವನ್ನು ಬೇರೆ ಯಾವುದಾದರೂ ಒಂದು ರೂಪದಲ್ಲಿ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರೈತರ ಬರ ಪರಿಹಾರ ಅಥವಾ ಮಹಾಪೂರ ಪರಿಹಾರ ಹಾಗೂ ಸಾಲ ಮನ್ನಾ ಈ ವಿಷಯಗಳ ಬಗ್ಗೆಯೂ ಕೂಡ ಬೇರೆ ಸಮಯವನ್ನು ಗೊತ್ತು ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವೈ. ಕೆ. ರಾಮಯ್ಯ : ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು : ಯಾವ ರೂಲ್ ಕೆಳಗೆ ತಮ್ಮ ಪಾಯಿಂಟ್ ಆಫ್ ಆರ್ಡರ್ ಇದೆ, ಅದನ್ನೇ ತಾವು ಹೇಳಲಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಇದು 72ನೇ ನಿಯಮದ ಪ್ರಕಾರ ಗಮನ ಸೆಳೆಯುವ ಸೂಚನೆಯಲ್ಲಿ ಬರುತ್ತದೆ. Rule 72 says,

' There shall be no debate on such statement at the time it is made but each member in whose name the item stands in the list of business may, with the permission of the Speaker ask a question. '

Here even the person who moves the call attention of the Minister he can ask only a question - there shall be no debate. I think the point of order raised by hon. Member Sri. Ramaiah has to be rejected...

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ತಾವು ನನಗೆ ಅಪ್ಪಣೆ ಕೊಟ್ಟು ಬಿಟ್ಟರೆ ಸಾಕು, ನನಗೆ ಇಲ್ಲಿ ಮಾತನಾಡಬೇಕು ಎಂದು ಏನೂ ಇಲ್ಲ.

ಅಧ್ಯಕ್ಷರು : ತಾವು ಮಾತನಾಡಬೇಕಾದರೆ, ರೂಲ್ ಪ್ರಕಾರ ಮಾತನಾಡಬೇಕು, ಅದನ್ನು ಮಾನ್ಯ ಮಂತ್ರಿಗಳು ಹೇಳಲಿ.

ಶ್ರೀ ವೈ. ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ನಾನು ಎತ್ತಿರುವಂಥ ವಿಧಿ ಬಿಂದು ಇಷ್ಟೇ. ತಾವು ಹೇಳುತ್ತೀರಿ ನೀರಾವರಿ ಬಗ್ಗೆ ಪ್ರಸ್ತಾಪ ಮಾಡುವುದನ್ನು ನೀವು ಆಯವ್ಯಯದಲ್ಲಿ ಮಾಡಿ ಎಂದು ಅಪ್ಪಣೆ ಕೊಟ್ಟಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅಬಕಾರಿ ಬಗ್ಗೆಯೂ ಸಹ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿ ಎಂದು ಆಜ್ಞೆ ಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೀವು ನೀರಾವರಿಗೆ ಅವಕಾಶ ಇಲ್ಲ ಎಂದು ಅಬಕಾರಿ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುವುದಾದರೆ ಇದಕ್ಕೆ ಏನು ಹೇಳಬೇಕು. ಈ ರಾಜ್ಯದ ಆದ್ಯತೆ ನೀರಾವರಿಯೇ ಅಥವಾ ಅಬಕಾರಿಯೋ?

ಅಧ್ಯಕ್ಷರು : ತಾವು ದಯವಿಟ್ಟು ತಿಳಿದುಕೊಳ್ಳಬೇಕು. ರೂಲ್ 68ರ ಕೆಳಗೆ ತಾವು

ಕೇಳಿದ್ದೀರಿ. ಇವರು ಗಮನ ಸೆಳೆಯುವ ಸೂಚನೆ ಕೇಳಿದ್ದಾರೆ. ಅಲ್ಲಿ ನಿಮ್ಮ ಡಿಬೆಟ್ ಆಗುತ್ತದೆ ಇಲ್ಲಿ ಆಗುವುದಿಲ್ಲ.

ಶ್ರೀ ವೈ. ಕೆ. ರಾಮಯ್ಯ : ಪ್ರಸ್ತಾವನೆ ಇಲ್ಲೂ ಆಗುತ್ತದೆ, ಅಲ್ಲೂ ಆಗುತ್ತದೆ ಅಲ್ಲವೇ?

ಅಧ್ಯಕ್ಷರು : ಪ್ರಸ್ತಾವನೆಯಾದರೆ ಎಲ್ಲಾ ವಿಷಯ ಪ್ರಸ್ತಾವನೆ ಮಾಡುತ್ತಾರೆ. ಪ್ರಸ್ತಾವನೆಯೊಳಗೆ ಬೇರೆ ಬೇರೆ ಇದೆಯಲ್ಲ. ಗಮನ ಸೆಳೆಯುವ ಸೂಚನೆಯಲ್ಲಿ ಅವರು ಒಂದು ಸ್ಟೇಟ್‌ಮೆಂಟ್ ಕೊಡುತ್ತಾರೆ ಬಹಳ ಎಂದರೆ ಒಂದು ಪ್ರಶ್ನೆ ಮಾತ್ರ ಕೇಳಬಹುದು.

ಶ್ರೀ ವೈ.ಕೆ. ರಾಮಯ್ಯ : ಈ ಸದನದಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನಕ್ಕಿಂತಲೂ ಅಬಕಾರಿ ಚರ್ಚೆಯ ಅವಶ್ಯಕತೆಯೇ ತಮ್ಮ ತೀರ್ಮಾನ ಎಂದು ನಾನು ತಿಳಿದುಕೊಳ್ಳಬಹುದೇ?

ಅಧ್ಯಕ್ಷರು : ಅದು ತಮ್ಮ ಅಭಿಪ್ರಾಯ.

ವಿಷಯ : ರಾಜ್ಯದ ಪ್ರತಿ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ. ಮಂತ್ರಿಗಳ ಹೇಳಿಕೆ.

* ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ, ಈ ಸದನದಲ್ಲಿ ಇಲ್ಲದೇ ವಿಧಾನ ಪರಿಷತ್ತಿನಲ್ಲಿ ಉತ್ತರ ಕೊಡುತ್ತಾ ಇದ್ದ ಸಮಯದಲ್ಲಿ, ಇಲ್ಲಿ ಔರಾದ್ ತಾಲ್ಲೂಕಿನ ಬಗ್ಗೆ ಶೂನ್ಯ ವೇಳೆಯಲ್ಲಿ ಒಂದು ಪ್ರಶ್ನೆ ಬಂತು ಹಾಗೂ ಅದರ ಜೊತೆಯಲ್ಲೇ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಕುಡಿಯುವ ನೀರಿನ ಬಗ್ಗೆ ಗಂಭೀರವಾದಂತಹ ಪ್ರಶ್ನೆ ಬಂದಿತೆಂದು ಹಾಗೂ ಅದಕ್ಕೆ ಕೆಲವು ವಿವರಗಳನ್ನು ಹೇಳಿಕೆಯ ಮೂಲಕ ಕೊಡುವುದು ಸೂಕ್ತ ಎಂದು ನಮ್ಮ ಕಾನೂನು ಮಂತ್ರಿಗಳು ಸೂಚಿಸಿದರು. ಆ ಹೇಳಿಕೆಯನ್ನು ನಾನು ಈಗ ಕೊಡುತ್ತಿದ್ದೇನೆ. ಪ್ರಥಮವಾಗಿ ಔರಾದ್ ತಾಲ್ಲೂಕಿನ ಬಗ್ಗೆ ನನ್ನ ಹತ್ತಿರ ಏನು ಮಾಹಿತಿ ಇದೆ ಅದನ್ನು ಸದನದ ಮುಂದೆ ಇಡಬೇಕಾಗುತ್ತದೆ. ಈ ಔರಾದ್ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎನ್ನುವುದು ನಮಗೆ ಗೊತ್ತಿದೆ. ಹಾಗೂ ಹೋದ ವರ್ಷ ಈ ತಾಲ್ಲೂಕಿನಲ್ಲಿ 114 ಕೆಲಸಗಳನ್ನು ಕಾರ್ಯಗತ ಮಾಡಲಿಕ್ಕೆ ತೆಗೆದುಕೊಂಡು ಅದರಲ್ಲಿ 100 ವರ್ಕ್ಸನ್ನು ಈಗಾಗಲೇ ಪೂರ್ತಿ ಮಾಡಿದ್ದೇವೆ. 114 ಕೆಲಸಗಳಿಗೆ 41 ಲಕ್ಷ ವೆಚ್ಚ ತಗಲುತ್ತದೆ. ಅದರಲ್ಲಿ ನೂರು ಕೆಲಸವನ್ನು ಈಗಾಗಲೇ ಪೂರ್ಕೆಸಿದ್ದೇವೆ. ಮುಂಬರುವ 93-94ನೇ ವರ್ಷದಲ್ಲಿ ಇಲ್ಲಿ 7-85 ಲಕ್ಷ ರೂಪಾಯಿಯ ಕಾರ್ಯಕ್ರಮ ಮಾಡುತ್ತಿದ್ದೇವೆ. ಔರಾದ್ ತಾಲ್ಲೂಕಿನಲ್ಲಿ 19 ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಎಂದು ನಮ್ಮ ಗಮನಕ್ಕೆ ಬಂದಿದೆ. ಬೀದರ್ ಡಿಸ್ಟ್ರಿಕ್ಟ್‌ನ 5 ತಾಲ್ಲೂಕುಗಳ 88 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಈಗ ನಾವು ಇಡೀ ಕರ್ನಾಟಕದಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಏನಿದೆ ಅದರ ಹಿನ್ನೆಲೆಯನ್ನು ನೋಡಬೇಕು, ಎಂದು ನಾನು ಸೂಚಿಸುತ್ತಿದ್ದೇನೆ. ಇದರ ಬಗ್ಗೆ ನಾನು ಸಂಕ್ಷಿಪ್ತವಾಗಿ ಇತಿಹಾಸ ಕೊಟ್ಟರೂ ತಪ್ಪಾಗುವುದಿಲ್ಲ. ನಾವು ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರಿನ ಸಮಸ್ಯೆಯನ್ನು ಏನು ಎದುರಿಸುತ್ತಿದ್ದೇವೆ ಇದಕ್ಕೆ ಸುಮಾರು 20 ವರ್ಷದ ಇತಿಹಾಸ ಇದೆ. 1972ರಲ್ಲಿ ಕರ್ನಾಟಕ ರಾಜ್ಯ ಏನು ಭಾರೀ ಬರಗಾಲವನ್ನು ಎದುರಿಸಬೇಕಾಯಿತು. ಆಗ ನಾನು ಹಣಕಾಸಿನ ಮಂತ್ರಿಯಾಗಿದೆ. ನನಗೆ ಗೊತ್ತಿದೆ ಆಗ ನಾವು ಕೊಳವೆ ಬಾವಿಗಳನ್ನು ಹೆಚ್ಚುಹೆಚ್ಚಾಗಿ ತಂದು,